**ದಿಃ 07.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ಎಸ್ ಕೆ ವಕೀಲರಿಂದಃ-

ನಾನು ದಿನೇಶ್ ಪಿ ಇವರ ಪತ್ನಿ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ . ಆಧಾರ್ ಕಾರ್ಡ್ ಇರುವುದಾಗಿ ನುಡಿಯುತ್ತಾರೆ. ಸದರಿ ದಿನೇಶ್ ರವರಿಗೆ ಎಷ್ಟು ಜನ ಮಕ್ಕಳು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಆಧಾರ್ ಕಾರ್ಡ್ ಇರುವುದಾಗಿ ನುಡಿಯುತ್ತಾರೆ. 1ನೇ ಅರ್ಜಿದಾರರು ದಿನೇಶ್ ರವರ ಅಮ್ಮ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಆಧಾರ್ ಕಾರ್ಡ್ ಇರುವುದಾಗಿ ನುಡಿಯುತ್ತಾರೆ. ಮೃತ ದಿನೇಶ್ ಇವರ ಕುಟುಂಬದ ವಂಶವೃಕ್ಷ ಇದೆಯಾ ಎಂದರೆ ಸಾಕ್ಷಿ ಇದೆ ನೀಡಿಲ್ಲ ಎಂದು ನುಡಿಯುತ್ತಾರೆ.

ನಾನು ಕಣ್ಣಾರೆ ಅಪಘಾತವನ್ನು ನೋಡಿಲ್ಲ ಎಂದರೆ ನಿಜ. ಆ ಕಾರಣ ಮುಖ್ಯ ವಿಚಾರಣೆ ಖಂಡಿಕೆ 3ರಲ್ಲಿ ಇರುವ ವಿಚಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ನಿಜ. ಮೃತರು ಅಪಘಾತವಾದ ಸಮಯದಲ್ಲಿ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸುಳ್ಳು. ಅಪಘಾತ ಆಗುವ ಕಾಲಕ್ಕೆ ಮೃತರು ಏನು ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮೃತರಿಗೆ ಯಾವ ರೀತಿ ಸಂಬಳ ಬರುತ್ತಿತ್ತು ಎಂದರೆ ಸಾಕ್ಷಿ ಪ್ರತೀ ವಾರ ಕೈಗೆ ಬರುತ್ತಿತ್ತು ಎಂದು ನುಡಿಯುತ್ತಾರೆ.

ನಾನು ಏನು ಕೆಲಸ ಮಾಡುತ್ತೇನೆ ಎಂದರೆ ಸಾಕ್ಷಿ ಕೂಲಿ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಮೃತರಿಗೆ ಯಾವುದೇ ಆದಾಯ ಇರಲಿಲ್ಲ ಹಾಗೂ ನಾನು ಅವರ ಆದಾಯದ ಮೇಲೆ ಅವಲಂಬಿತಳಾಗಿರಲಿಲ್ಲ ಎಂದರೆ ಸುಳ್ಳು. ನಾನು ಮೃತರ ಎಲ್ಲಾ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸುಳ್ಳು. ನಾನು ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ನನ್ನ ಗಂಡನ ತಪ್ಪಿನಿಂದಲೇ ಅಪಘಾತ ಆಗಿದ್ದು ಜೀಪ್ ಚಾಲಕನ ತಪ್ಪು ಇರುವುದಿಲ್ಲ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ.

**ನ ಉ ರೀ ಬ ನ್ಯಾ ಬೆ ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟ್ವಾಳ.**